ವಿಜಯವಾಣಿ
ಕನ್ನಡಿಗರ ಧ್ವನಿ

Sunday 18th November 2018

# RV College of Engineering Students are the finished Hybrid Tractor

## ವಿದ್ಯಾರ್ಥಿಗಳೇ ಸಿದ್ಧಪಡಿಸಿದ ಹೈಬ್ರಿಡ್ ಟ್ರ್ಯಾಕ್ಟರ್



ಯುವಜನತೆಯೂ ಕೃಷಿ ಕ್ಷೇತ್ರದತ್ತ ಆಕರ್ಷಿತವಾಗುತ್ತಿದೆ ಎನ್ನುವುದಕ್ಕೆ ಕೃಷಿ ಮೇಳದಲ್ಲಿ ಆರ್.ವಿ. ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳೇ ಸಾಕ್ಷಿಯಾಗಿದ್ದಾರೆ. ಟೀಮ್ ಕೃಷಿ ಹೆಸರಿನ ವಿದ್ಯಾರ್ಥಿಗಳ ತಂಡ ಡೀಸೆಲ್ ಹಾಗೂ ವಿದ್ಯುತ್ ಚಾಲಿತ ಹೈಬ್ರಿಡ್ ಟ್ರ್ಯಾಕ್ಟರ್ ತಯಾರಿಸಿದ್ದಾರೆ. ಡೀಸೆಲ್ ಚಾಲಿತ ಟ್ರ್ಯಾಕ್ಟರ್‌ಗಳಿಗೆ ಪ್ರತಿ ಕಿ.ಮೀ.ಗೆ 9 ರೂ. ಖರ್ಚಾದರೆ, ವಿದ್ಯುತ್‌ನಲ್ಲಿ ಕೇವಲ 1 ರೂ. ಖರ್ಚಾಗಲಿದೆ. ಹೈಬ್ರಿಡ್ ಟ್ರ್ಯಾಕ್ಟರ್‌ಗೆ ವಿದ್ಯಾರ್ಥಿಗಳು ಈಗಾಗಲೇ ಸ್ವಾಮ್ಯಪತ್ರಕ್ಕೆ (ಪೇಟೆಂಟ್) ಅರ್ಜಿ ಸಲ್ಲಿಸಿದ್ದಾರೆ. ಅಮೆರಿಕನ್ ಸೊಸೈಟಿ ಆಫ್ ಅಗ್ರಿಕಲ್ಚರಲ್ ಮತ್ತು ಬಯೋಲಾಜಿಕಲ್ ಇಂಜಿನಿಯರ್ಸ್(ಅಸಾಬೆ)2019ರ ಮೇ ತಿಂಗಳಲ್ಲಿ ಆಯೋಜಿಸುವ ಟ್ರ್ಯಾಕ್ಟರ್ ಸ್ಪರ್ಧೆಯಲ್ಲಿ ಭಾಗವಹಿಸುವ ಗುರಿಯನ್ನು ವಿದ್ಯಾರ್ಥಿಗಳು ಇರಿಸಿಕೊಂಡಿದ್ದು, ವಿದೇಶದ ಆಧುನಿಕ ತಂತ್ರಜ್ಞಾನಗಳನ್ನು ಭಾರತಕ್ಕೆ ತರಲು ಉತ್ಸುಕರಾಗಿದ್ದಾರೆ. ಇದಕ್ಕಾಗಿ ಕೃಷಿ ಮೇಳವನ್ನು ವೇದಿಕೆಯಾಗಿ ವಿದ್ಯಾರ್ಥಿಗಳು ಉಪಯೋಗಿಸಿಕೊಂಡಿದ್ದಾರೆ.